## ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.

## ಸಿ.ಸಿ.ನಂ.**2383/2021**

ಸರಕಾರ ಪರಃ ಬನ್ನೂರು ಪೊಲೀಸ್ ಠಾಣೆ, ತಿ.ನರಸೀಪುರ -ವಿರುದ್ಧ- ಚೆನ್ನಿಗಸ್ವಾಮಿ ಮತ್ತು ಇತರರು

## ದೋಷಾರೋಪಣೆ

ನಾನು ಚೇತನ್ ಅನ್ನಾಧಾನಿ ಮಂಜುನಾಥ, ಬಿ.ಎ.ಎಲ್., ಎಲ್.ಎಲ್.ಎಂ., ಪ್ರ. ದ. ನ್ಯಾ ದಂ., ತಿ.ನರಸೀಪುರ ಈ ಮೂಲಕ,

ಆರೋಪಿತರಾದಃ

1. ಚೆನ್ನಿಗಸ್ವಾಮಿ,
   ಬಿನ್.ಕುಳ್ಳಯ್ಯ,
   ಸುಮಾರು 38 ವರ್ಷ ವಯಸ್ಸು,
2. ಚಂದ್ರಶೇಖರ್ .ಎಂ
   ಬಿನ್.ಮಾಯಿದೇಗೌಡ,
   ಸುಮಾರು 44 ವರ್ಷ ವಯಸ್ಸು,
3. ಚೆನ್ನೇಗೌಡ,
   ಬಿನ್.ಮಾಯಿದೇಗೌಡ,
   ಸುಮಾರು 51 ವರ್ಷ ವಯಸ್ಸು,
4. ಚಿಕ್ಕಮಾಯೀಗೌಡ ಉ ಚಿಕ್ಕವನು
   ಬಿನ್.ಮಾಯಿದೇಗೌಡ,
   ಸುಮಾರು 45 ವರ್ಷ ವಯಸ್ಸು,
5. ಶ್ರೀಕಾಂತ್,
   ಬಿನ್.ಕುರುಗೇಗೌಡ,
   ಸುಮಾರು 33 ವರ್ಷ ವಯಸ್ಸು,

   1 ರಿಂದ 5 ನೇ ಆರೋಪಿತರ ವಾಸ
   ಗುಡ್ಡದಕೊಪ್ಪಲು ಗ್ರಾಮ,
   ಬನ್ನೂರು ಹೋಬಳಿ, ಟಿ.ನರಸೀಪುರ ತಾಲ್ಲೂಕು,
   ಮೈಸೂರು ಜಿಲ್ಲೆ.

6. ಪುಟ್ಟಲಿಂಗಯ್ಯ ಬಿ ಉ ಪೂಜಾರಿ ಪುಟ್ಟಲಿಂಗಯ್ಯ,
   ಬಿನ್.ಬೋರಯ್ಯ,
   ಸುಮಾರು 72 ವರ್ಷ ವಯಸ್ಸು,
   ವಾಸ ದೊಡ್ಡಮಾಲಗೂಡು ಗ್ರಾಮ,
   ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ,

## ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ.

ದಿನಾಂಕ 14.06.2020 ರಂದು ಬೆಳಗ್ಗೆ 9.30 ಗಂಟೆ ಸಮಯದಲ್ಲಿ ಬನ್ನೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಗುಡ್ಡದಕೊಪ್ಪಲು ಗ್ರಾಮದ ಚಾಸಾ.1 ರವರ ಬಾಬ್ತು ಸರ್ವೆ ನಂ.151/2 ರಲ್ಲಿ ಚಾಸಾ.1 ಮತ್ತು 2 ರವರು ಕೆಲಸ ಮಾಡುತ್ತಿರುವಾಗ 1 ರಿಂದ 6 ನೇ ಆರೋಪಿಗಳಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 143 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

2 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಏಕೋದ್ದೇಶ ಹೊಂದಿ ನೀವುಗಳು ಹಿಂಸೆಯನ್ನು ಪ್ರಯೋಗಿಸಿ, ದೊಂಬಿ ಮಾಡಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 144 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

3 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಏಕೋದ್ದೇಶ ಹೊಂದಿ ಚಾಸಾ.1 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 447 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

4 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಏಕೋದ್ದೇಶ ಹೊಂದಿ ಚಾಸಾ.1 ರವರ ಜಮೀನಿನಲ್ಲಿ ಬೆಳೆದಿದ್ದ ಫಸಲನ್ನು ಕುಯ್ಯುತ್ತಿದ್ದಾಗ ಅದನ್ನು ತಡೆಯಲು ಬಂದ ಚಾಸಾ.1 ಮತ್ತು 2 ರವರನ್ನು ಅಕ್ರಮವಾಗಿ ತಡೆದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 341 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

5 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಏಕೋದ್ದೇಶ ಹೊಂದಿ ಚಾಸಾ.1 ರವರ ಜಮೀನಿನಲ್ಲಿ ಬೆಳೆದಿದ್ದ ಫಸಲನ್ನು ಕುಯ್ಯುತ್ತಿದ್ದಾಗ ಅದನ್ನು ತಡೆಯಲು ಬಂದ ಚಾಸಾ.1 ರವರ ಸೀರೆಯನ್ನು 1 ನೇ ಆರೋಪಿಯಾದ ನೀವು ಹಿಡಿದು ಎಳೆದಾಡಿ ಸಾರ್ವಜನಿಕ ಸ್ಥಳದಲ್ಲಿ ಅಮಾನಪಡಿಸಿದ್ದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 354(ಬಿ) ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

6 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಏಕೋದ್ದೇಶ ಹೊಂದಿ 1 ನೇ ಆರೋಪಿಯಾದ ನೀವು ಕೈಗಳಿಂದ ಚಾಸಾ.1 ರವರ ಬೆನ್ನಿಗೆ ಹೊಡೆದು ನೋವುಂಟು ಮಾಡಿದ್ದು ಹಾಗೂ 2 ನೇ ಆರೋಪಿಯಾದ ನೀವು ಚಾಸಾ.1 ರವರ ಕೈಗಳನ್ನು ತುಳಿದು ನೋವುಂಟು ಮಾಡಿದ್ದು ಹಾಗೂ ತಡೆಯಲು ಬಂದ ಚಾಸಾ.2 ರವರನ್ನು 2 ನೇ ಆರೋಪಿಯಾದ ನೀವು ಕೆಳಕ್ಕೆ ಬೀಳಿಸಿ ಎಡಮುಂಗೈಗೆ ನೋವುಂಟು ಮಾಡಿದ್ದು ಹಾಗೂ 3 ರಿಂದ 6 ನೇ ಆರೋಪಿತರಾದ ನೀವು ಚಾಸಾ.1 ಮತ್ತು 2 ರವರ ತಲೆಗೆ ಮತ್ತು ಮೈಕೈಗೆ ಕಾಲಿನಿಂದ ತುಳಿದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ನೀವು

ಭಾ.ದಂ.ಸಂ. ಕಲಂ 323 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

7 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಏಕೋದ್ದೇಶ ಹೊಂದಿ ಚಾಸಾ.1 ಮತ್ತು 2 ರವರಿಗೆ ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ನೀವು ಭಾ.ದಂ.ಸಂ. ಕಲಂ 504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

8 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಏಕೋದ್ದೇಶ ಹೊಂದಿ ಚಾಸಾ.1 ಮತ್ತು 2 ರವರಿಗೆ ನಿಮ್ಮನ್ನು ಒಂದಲ್ಲ ಒಂದು ದಿನ ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾ.ದಂ.ಸಂ.ಕಲಂ 506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆದುದರಿಂದ ಈ ಆರೋಪಣೆಯನ್ನು ನಿಮ್ಮ ಮೇಲಿಟ್ಟಿದ್ದು, ಅದರ ವಿಚಾರಣೆಯು ನಿಮ್ಮ ಮೇಲೆ ನಡೆಯತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

ಪ್ರಶ್ನೆಃ ಇದೀಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರಃ

1 ನೇ ಆರೋಪಿ

2 ನೇ ಆರೋಪಿ

3 ನೇ ಆರೋಪಿ

4 ನೇ ಆರೋಪಿ

5 ನೇ ಆರೋಪಿ

6 ನೇ ಆರೋಪಿ

ಪ್ರಶ್ನೆಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ? ವಿಚಾರಣೆ ಆಗಬೇಕೇ?

ಉತ್ತರಃ

1 ನೇ ಆರೋಪಿ

2 ನೇ ಆರೋಪಿ

3 ನೇ ಆರೋಪಿ

4 ನೇ ಆರೋಪಿ

5 ನೇ ಆರೋಪಿ

6 ನೇ ಆರೋಪಿ

(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ.)

ದಿನಾಂಕಃ 18.07.2023 ಪ್ರ.ದ.ನ್ಯಾ.ದಂ., ತಿ.ನರಸೀಪುರ.